ಕೆಲವರು ಮೊದಲೇ ಆಮ್ಲೇಟ್ ಕಟ್ಟಿಸಿಕೊಂಡು ಎಣ್ಣೆ ಹೊಡೆಯಲು ಬೋರಿನ ಕಡೆಗೋ ಇಲ್ಲ ಹೊಲದ ಕಡೆಗೋ ಹೋಗಿ ನೆಮ್ಮದಿಯಿಂದ ವ್ಯವಹಾರ ಮುಗಿಸಿಕೊಂಡು ಬರುತ್ತಿದ್ದರು. ಸುತ್ತ ಮುತ್ತಲಿನ ಊರುಗಳ ದೊಡ್ಡ ಮನುಷ್ಯರು ಕೆಲಸದ ನಿಮಿತ್ತ ಬಂದರೆ ರಾಜಾರೋಷವಾಗಿ ಅಕ್ಕಯ್ಯಮ್ಮನ ಅಂಗಡಿಯ ಮುಂದೆ ನಿಂತು ಬಿಸಿ ಬಿಸಿ ಆಮ್ಲೇಟ್ ಬಾಯಿಗೆಸೆದುಕೊಂಡು ಹೋಗುತ್ತಿದ್ದರು. ಹೆಲ್ಪರ್ ನಾಗರಾಜ ಎಲ್ಲಾ ಕೆಲಸಗಳಲ್ಲೂ ಅಕ್ಕಯ್ಯಮ್ಮನಿಗೆ ಫುಲ್ ಸಪೋರ್ಟ್ ಮಾಡುತ್ತಿದ್ದರಿಂದ ಅಂಗಡಿ ತುಂಬಾ ಸಲೀಸಾಗಿ ನಡೆದುಕೊಂಡು ಹೋಗುತ್ತಿತ್ತು. ಅವನಿಗೆ ತಿಂಗಳಿಗೆ ಮೂರು ಸಾವಿರ ಸಂಬಳ ಫಿಕ್ಸ್ ಮಾಡಿದ್ದಳಲ್ಲದೆ ಮನೆಗೆ ಡೈಲಿ ಎರಡೆರಡು ಆಮ್ಲೇಟ್ ಕಳಿಸುತ್ತಿದ್ದಳು. ಒಂದೇ ಒಂದು ವರ್ಷದಲ್ಲೇ ಅಕ್ಕಯ್ಯಮ್ಮ ಹಳೆಯ ಮನೆಯನ್ನು ಚನ್ನಾಗಿ ರಿಪೇರಿ ಮಾಡಿಸಿದ್ದಲ್ಲದೆ ಬ್ಯಾಲ್ಯದ ಇಂಡಿಯನ್ ಬ್ಯಾಂಕ್‌ನಲ್ಲಿ ಎಂಬತ್ತು ಸಾವಿರ ಸೇವಿಂಗ್ಸ್ ಡಿಪಾಸಿಟ್ ಮಾಡಿದ್ದಳು. ವಾರದಲ್ಲಿ ಏಳೆಂಟು ಜನ ಆಮ್ಲೇಟ್ ಕಾಸು ಕೊಡುವುದರಲ್ಲಿ ಕೈ ಎತ್ತಿದರೂ ಅದು ಅಕ್ಕಯ್ಯಮ್ಮನಿಗೆ ಲೆಕ್ಕವೇ ಇರುತ್ತಿರಲಿಲ್ಲ. ಊರಿನಲ್ಲಿ ಅಲ್ಲದೆ ಅಕ್ಕಯ್ಯಮ್ಮ ಸುತ್ತಮುತ್ತ ಐದಾರು ಊರುಗಳಲ್ಲಿ ಫೇಮಸ್ ಆದಳು. ದೇವಸ್ಥಾನ ಕಟ್ಟಲು, ಮದುವೆ ಮಾಡಲು ಯಾರಾದರೂ ಬಂದು ದುಡ್ಡು ಕೇಳಿದರೆ ಅಕ್ಕಯ್ಯಮ್ಮ ಧಾರಾಳವಾಗಿ ಐನೂರು, ಸಾವಿರ ಕೊಟ್ಟುಬಿಡುತ್ತಿದ್ದಳು. ಇದರಿಂದಾಗಿ ಕೂಡಾ ಅಕ್ಕಯ್ಯಮ್ಮನ ಖ್ಯಾತಿ ಇಮ್ಮಡಿಯಾಗಿತ್ತು.

ಹೀಗಿರುವಾಗ ಊರಿನಲ್ಲಿ ಗ್ರಾಮ ಪಂಚಾಯ್ತಿ ಎಲೆಕ್ಷನ್ ಬಂದುಬಿಟ್ಟಿತ್ತು. ಒಂದು ಸೀಟು ಎಸ್ಸಿಗೆ ರಿಸರ್ವ್ ಆಗಿದ್ದರೆ ಇನ್ನೊಂದು ಸೀಟು ಸಾಮಾನ್ಯ ಮಹಿಳೆಗೆ ರಿಸರ್ವ್ ಆಗಿತ್ತು. ಊರಲ್ಲಿ ಮಾಮೂಲಿಯಾಗಿ ಎಲೆಕ್ಷನ್ ಚಟುವಟಿಕೆಗಳು ಗರಿಗೆದರಿದ್ದವು. ಊರಲ್ಲಿ ಮೂರು ಪಾರ್ಟಿಗಳಿದ್ದು, ಮೂರು ಪಾರ್ಟಿಗಳಲ್ಲೂ ಎಲೆಕ್ಷನ್ನಿಗೆ ಯಾರನ್ನು ಅಭ್ಯರ್ಥಿಗಳನ್ನಾಗಿ ನಿಲ್ಲಿಸಬೇಕೆಂಬ ವಿಷಯದಲ್ಲಿ ಬಿಸಿ ಬಿಸಿ ಚರ್ಚೆಗಳು ಪ್ರಾರಂಭವಾಗಿದ್ದವು. ಅಕ್ಕಯ್ಯಮ್ಮನ ಆಮ್ಲೇಟ್ ಅಂಗಡಿ ಕೂಡಾ ಅಂಥ ಚರ್ಚೆಗಳ ಒಂದು ಮುಖ್ಯವಾದ ತಾಣವಾಗಿತ್ತು. ಹೆಂಡತಿಯರು ಎಲೆಕ್ಷನ್ನಿನಲ್ಲಿ ಗೆದ್ದರೂ ಮಂಡಲ ಪಂಚಾಯ್ತಿಯಲ್ಲಿ ಪಾರುಪತ್ಯ ನಡೆಸುತ್ತಿದ್ದವರು ಮಾತ್ರ ಅವರ ಗಂಡಂದಿರೇ. ಹಾಗಾಗಿ, ಗಂಡಸರೇ ಮುಂದೆ ನಿಂತು ಹೆಂಡತಿಯರನ್ನು ಎಲೆಕ್ಷನ್ನಿಗೆ ನಿಲ್ಲಿಸಿ ಗೆಲ್ಲಿಸಲು ಇನ್ನಿಲ್ಲದ ಪಡಿಪಾಟಲುಗಳನ್ನು ಬೀಳುತ್ತಿದ್ದರು. ಪೊಲೀಸ್ ನಂಜುಂಡ ತನ್ನ ಹೆಂಡತಿಯನ್ನು, ದೊಡ್ಮನೆ ನಾಗರಾಜ ತನ್ನ ಹೆಂಡತಿಯನ್ನು, ಸುಬ್ಬರಾಯನ ಮಗ ಚಂದ್ರಣ್ಣ ತನ್ನ ಹೆಂಡತಿಯನ್ನು ಹೀಗೆ ಮೂರು ಜನರೂ ಮೂರು ಪಾರ್ಟಿಗಳಿಂದ ಎಲೆಕ್ಷನ್ನಿಗೆ ನಿಲ್ಲಿಸಲು ತೀರ್ಮಾನಿಸಿ ಊರು, ಹೊಲ, ಗದ್ದೆಗಳಲ್ಲಿ ಪ್ರಚಾರ ಶುರುಮಾಡಿಬಿಟ್ಟಿದ್ದರು. ಊರಿನಲ್ಲಿ ಎಲ್ಲರಿಗೂ ಇವರ ಬಂಡವಾಳ ಗೊತ್ತಿದ್ದರಿಂದ, ''ಏನ್ ಘನಂದಾರಿ ಕೆಲ್ಸ ಕಿತ್ತಾಕ್ತಾರೆ ಅಂತ ಎಲೆಕ್ಷನ್ನಿಗೆ ನಿಂತ್ಕಂಬ್ತಾರಪ್ಪ ಈ ಹೆಂಗುಸ್ರು. ಸರಿಯಾಗಿ ಅ ಆ ಇ ಈ ಹೇಳಾಕ್ ಬರಲ್ಲ, ಏಳ್ರುಗಂಟ ಮಗ್ಗಿ ಬರಲ್ಲ. ಮೂವರ ಗಂಡಂದ್ರೂ ಮೊದ್ಲೆ ಕಿತ್ಕಂಡ್ ತಿಂಬೋರು...'' ಎಂದು ಮರೆಯಲ್ಲಿ ಮಾತನಾಡಿಕೊಂಡರೂ ಎದುರು ಸಿಕ್ಕಿದಾಗ, ''ಒಳ್ಳೆದಾಯ್ತು ಬಿಡು, ನಿನ್ಹೆಂಡ್ತಿ ಗೆದ್ರೆ ನೀನ್ ಗೆದ್ದಂಗೆ ಅಲ್ವೆ. ಯಂಗೊ ನಿಭಾಯಿಸ್ತೀಯ. ನಮ್ಮನೆ ಓಟೆಲ್ಲ ನಿನ್ಹೆಂಡ್ತಿಗೆ ಬಿಡು...'' ಎಂದು ಮೂವರು ಗಂಡಸರಿಗೂ ಹೇಳಿ ಮಧುಗಿರಿ ಬೆಟ್ಟ ಹತ್ತಿಸುತ್ತಿದ್ದರು. ಇನ್ನು ಹಟ್ಟಿಯಿಂದ ಹೊಸ ತಲೆಮಾರಿನ ಹುಡುಗರೆಲ್ಲಾ ಸೇರಿ ಮುದ್ದಯ್ಯನ ಮೊಮ್ಮಗನನ್ನು ನಿಲ್ಲಿಸಲು ತೀರ್ಮಾನಿಸಿದ್ದರು. ಮೂವರು ಜನರಲ್ ಓಟುಗಳನ್ನು ಹಂಚಿಕೊಂಡರೆ ಹಟ್ಟಿಯ ಓಟುಗಳು ಅರವತ್ತು ಪರ್ಸೆಂಟ್ ಬಿದ್ದರೂ ಹಟ್ಟಿಯ ಕ್ಯಾಂಡಿಡೇಟ್ ಜನರಲ್ ಭಾಗದಲ್ಲಿ ಮೂವರನ್ನೂ ಸೋಲಿಸಿ ಗೆಲ್ಲುವ ಲೆಕ್ಕಾಚಾರ ಅವರದಾಗಿತ್ತು.

ಅಕ್ಕಯ್ಯಮ್ಮನ ಆಮ್ಲೇಟ್ ಅಂಗಡಿಯ ಬಳಿ ಸಹ ಎಲೆಕ್ಷನ್ನಿನ ಸಮಾಚಾರಗಳು ಅಕ್ಕಯ್ಯಮ್ಮ